**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/102/2016–17/ 5271 **ದಿನಾಂಕ: 06.10.2016**

**– :ಸಾರಿಗೆ ವಾಹನಗಳನ್ನು ಗುತ್ತಿಗೆ ಆಧಾರದಲಿ ದ್ವೈವಾರ್ಷಿಕ ಅವಧಿಗೆ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ:–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಹಾಲು ಶೇಖರಣೆ/ವಿತರಣೆ ಮಾಡಲು ವಿವಿಧ ಸಾಮರ್ಥ್ಯದ ಸರಕು ಸಾಗಾಣಿಕೆ ಮ್ಯಾಕ್ಸ್ ಪಿಕ್‌ಅಪ್/ಬೋಲೆರೊ ಪಿಕ್‌ಅಪ್ /ಲಘು ವಾಹನಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ** | **ದಿನಾಂಕ: 17.10.2016 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ | **ದಿನಾಂಕ: 16.11.2016 ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ** | **ದಿನಾಂಕ: 19.11.2016 ರಂದು ಬೆಳಿಗ್ಗೆ: 11.30 ಗಂಟೆಗೆ** |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ** | **ದಿನಾಂಕ: 21.11.2016 ರಂದು ಬೆಳಿಗ್ಗೆ: 11.30 ಗಂಟೆಗೆ** |

ಈ ಕೆಳಗೆ ನಮೂದಿಸಿರುವ ಹಾಲು ಶೇಖರಣಾ/ವಿತರಣಾ ಮಾರ್ಗಗಳಿಗೆ ಸಂಘಗಳಿಂದ ಶೀತಲೀಕರಣ ಕೇಂದ್ರ/ಡೈರಿಗೆ ಹಾಲು ಸಾಗಾಣಿಕೆ ಮಾಡಲು ಟಾರ್ಪಾಲ್ ಮುಚ್ಚಿದ ಬಾಡಿಯುಳ್ಳ ವಿವಿಧ ಸಾಮರ್ಥ್ಯದ **2005** ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ಸರಕು ಸಾಗಾಣಿಕೆ ವಾಹನ ಒದಗಿಸಲು ಎರಡು ವರ್ಷದ ಅವಧಿ ಅಥವಾ ಬಿ.ಎಂ.ಸಿ. ಕೇಂದ್ರ ಪ್ರಾರಂಭವಾಗುವವರೆಗೆ ಯಾವುದು ಮೊದಲೊ ಅಲ್ಲಿಯವರೆಗೆ ಮತ್ತು ಶಿವಮೊಗ್ಗ ಡೈರಿಯಿಂದ ಶಿವಮೊಗ್ಗ ನಗರಕ್ಕೆ ಬೆಳಿಗ್ಗೆ/ಸಂಜೆ ಎರಡು ಸರತಿಗಳಲ್ಲಿಯೂ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ವಿತರಣೆ ಮಾಡಲು **2006** ರ ಅಥವಾ ನಂತರದ ಸಾಲಿನ ಇನ್ಸುಲೇಟೆಡ್ ಬಾಡಿಯುಳ್ಳ ವಾಹವನ್ನು **02 ವರ್ಷದ ಅವಧಿಗೆ** ಬಾಡಿಗೆ/ಗುತ್ತಿಗೆ ಆಧಾರದ ಮೇಲೆ ಒದಗಿಸಲು ಟೆಂಡರ್ ಕರೆಯಲಾಗಿದೆ. :–

| ಮಾರ್ಗದ ಸಂಖ್ಯೆ | ಮಾರ್ಗದ ಹೆಸರು | ವಾಹನ ಸಾಮರ್ಥ್ಯ ಟನ್‌ಗಳಲ್ಲಿ/ಮಾದರಿ | ದಿನದ ಅಂದಾಜು ಅಂತರ ಕಿ.ಮೀ (ಎರಡುಸರತಿಯಿಂದ) | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 1 | ಪುಣ್ಯಕ್ಷೇತ್ರ ಹಾಲು ಶೇಖರಣಾ ಮಾರ್ಗ (ದಾವಣಗೆರೆ ಡೈರಿ, ಹೊನ್ನಮರಡಿ, ಬಲ್ಲೂರು, ಕೈದಾಳೆ, ನಾಗನೂರು, ದಾವಣಗೆರೆ ಡೈರಿ) | 2.5 ಟನ್ | 184 ಕಿ.ಮೀ | 30,000/– | 40,000/– |
| 2 | ಅಮ್ಮನಗುಡ್ಡ ಹಾಲು ಶೇಖರಣಾ ಮಾರ್ಗ (ಆನಂದಪುರ ಶೀ.ಕೇಂದ್ರ, ಮುಂಬಾರು,ಕೊಡೂರು, ಚಿಕ್ಕಜೇನಿ, ಹೆದ್ದಾರಿಪುರ ಆನಂದ್‌ಪುರಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 144 ಕಿ.ಮೀ | 25,000/– | 30,000/– |
| 3 | ಕುರುವತ್ತಿ–1 ಹಾಲು ಶೇಖರಣೆ ಮಾರ್ಗ (ದಾವಣಗೆರೆ ಡೈರಿ, ಬೆಂಡಿಗೆರೆ, ತಲವಾಗಿಲು, ಚಿರಸ್ಥಿಹಳ್ಳಿ, ನಿಲಗುಂದ, ಸಿದ್ದೇಶ್ವರನಗರ, ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 240 ಕಿ.ಮೀ | 25,000/– | 30,000/– |
| 4 | ಕುರುವತ್ತಿ –2ಹಾಲು ಶೇಖರಣೆ ಮಾರ್ಗ (ದಾವಣಗೆರೆ ಡೈರಿ, ವಟ್ಲಹಳ್ಳಿ, ಟಿ.ತುಂಬಿಗೆರೆ, ತೆಲಗಿ, ಅಲಗಿಲವಾಡ, ಶಿಂಗ್ರೀಹಳ್ಳಿ ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 160 ಕಿ.ಮೀ | 25,000/– | 30,000/– |
| 5 | ವೀರಭದ್ರ ಹಾಲು ಶೇಖರಣಾ ಮಾರ್ಗ (ತಡಗಣಿ ಶೀ.ಕೇಂದ್ರ, ಶಿರಿಹಳ್ಳಿ, ಕಾನಳ್ಳಿ, ಮಾಳಗೊಂಡನಕೊಪ್ಪ, ಬಿಸಿಲಹಳ್ಳಿ, ಕೊರಟಿಕೆರೆ ತಡಗಣಿ ಸಿ.ಸಿ. ) | 2.5 ಟನ್ | 114 ಕಿ.ಮೀ. | 30,000/– | 40,000/– |
| 6 | ಉಕ್ಕಡಗಾತ್ರಿ –3 ಹಾಲು ಶೇಖರಣಾ ಮಾರ್ಗ (ದಾವಣಗೆರೆ ಡೈರಿ, ಬಾನುವಳ್ಳಿ, ಹಳೇಬಾತಿ, ಎಲೆಬೇತೂರು ಬಿ., ದಾವಣಗೆರೆ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 72 ಕಿ.ಮೀ. | 25,000/– | 30,000/– |
| 7 | ತೀರ್ಥರಾಮೇಶ್ವರ–5 ಹಾಲು ಶೇಖರಣಾ ಮಾರ್ಗ (ಹೊನ್ನಾಳಿ ಶೀತಲೀಕರಣ ಕೇಂದ್ರ ಆರುಂಡಿ, ಮಲ್ಲಿಗೇನಹಳ್ಳಿ, ಹೊನ್ನಾಳಿ ಶೀತಲೀಕರಣ ಕೇಂದ್ರ) | ಟಾಟಾ ಏಸ್ | 80 ಕಿ.ಮೀ | 10,000/– | 15,000/– |
| 8 | ಶಿವಮೊಗ್ಗ ಹಾಲು ವಿತರಣಾ ಮಾರ್ಗ –2 ಬೆಳಿಗ್ಗೆ/ಸಂಜೆ ಶಿವಮೊಗ್ಗ ಡೈರಿಯಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಶಿವಮೊಗ್ಗ ನಗರದಲ್ಲಿ ವಿತರಣೆ ಮಾಡುವುದು ಹಾಗೂ ನಗದನ್ನು ಸಂಗ್ರಹಿಸಿ ಒಕ್ಕೂಟಕ್ಕೆ ಜಮಾ ಮಾಡುವುದು. | 500 ಕ್ರೇಟ್ | 85 ಕಿ.ಮೀ | 25,000/– | 2,00000/– |
| 9 | ಪಶು ಆಹಾರ /ಮೇವಿನ ಬೀಜ /ಸರಬರಾಜು ವಾಹನ (ದಾವಣಗೆರೆ ಡೈರಿಯಿಂದ ಪಶುಆಹಾರ/ಮೇವಿನ ಬೀಜ ಬಿ.ಎಂ.ಸಿ. ಕೇಂದ್ರಗಳಿಗೆ ಸಾಗಾಣಿಕೆ ಮಾಡುವುದು.) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | ಮಾಸಿಕ ಅಂದಾಜು 1000 ಕಿ.ಮೀ | 10,000/– | 15000/– |

**ಮುಂದುವರೆದಿದೆ.....**

**ನಿಬಂಧನೆ ಮತ್ತು ಷರತ್ತುಗಳು**

1. **ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು/ದಾಖಲಾತಿಗಳನ್ನು ಹೊಂದಿರತಕ್ಕದ್ದು. ವಾಹನ ಹೊಂದಿಲ್ಲದವರು ಟೆಂಡರ್ ದರ ಒಪ್ಪಿಗೆಯಾದ 30 ದಿನದೊಳಗೆ ಟೆಂಡರ್‌ನಲ್ಲಿ ಪ್ರಕಟಿಸಿದ ನಿಗದಿತ ಮಾದರಿಯ/ ಸಾಮರ್ಥ್ಯದ ವಾಹನ ಖರೀದಿಸಿ ನೀಡಬಹುದು. ತಪ್ಪಿದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿ. ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**
2. **ಇ-ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.**
3. **ಕನಿಷ್ಠ ಇ.ಎಂ.ಡಿ. ರೂ. 10,000/- ಆದರೆ ಶೇಖರಣೆ/ವಿತರಣೆ ಮಾರ್ಗದ ವಾಹನಗಳಿಗೆ, ಮ್ಯಾಕ್ಸ್ ಪಿಕ್‌ಅಪ್/ ಲಘು ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಯನ್ನು ಇ-ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.**
4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ಶೇಖರಣೆ/ವಿತರಣೆ ವಾಹನಕ್ಕೆ ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ.
5. ಹಾಲು ಶೇಖರಣಾ ವಾಹನಗಳು **2005** ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. **ಹಾಲು ವಿತರಣಾ ವಾಹನಗಳು 2006ರ ಅಥವಾ ನಂತರದ ಮಾಡಲ್‌ನ ಇನ್ಸುಲೇಟೇಡ್ ವಾಹನ ಆಗಿರಬೇಕು. ಟೆಂಡರ್ ದರ ಒಪ್ಪಿಗೆಯಾದ ಕೂಡಲೇ ಹಾಲು ಸಾಗಾಣಿಕೆ/ವಿತರಣೆ ವಾಹನವನ್ನು FSSAI ಲೈಸನ್ಸ್/ನೊಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ.** ಶೇಖರಣಾ ವಾಹನಗಳು ಕೆಲವು ಸಂದರ್ಭಗಳಲ್ಲಿ ಹಾಲು ಶೇಖರಣಾ ಕಾರ್ಯದೊಂದಿಗೆ ಆಯಾ ಮಾರ್ಗಗಳಲ್ಲಿ ಮಾರ್ಗವನ್ನು ಬದಲಾಯಿಸಿದಂತೆ ಹಾಲು ಶೇಖರಣಾ, ವಿತರಣಾ ಕಾರ್ಯವನ್ನು ಸಹ ಕೈಗೊಳ್ಳಬೇಕು. ಮ್ಯಾಕ್ಸ್‌ಪಿಕ್‌ಅಪ್ ವಾಹನಗಳು 1.5 ಟನ್ ಸಾಮರ್ಥ್ಯದವರೆಗೆ ಹಾಲನ್ನು ಸಾಗಾಣಿಕೆ ಮಾಡತಕ್ಕದ್ದು.
6. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು.
7. ಹಾಲು ಶೇಖರಣಾ/ವಿತರಣಾ/ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಹಾಗೂ ಸಂಘಗಳನ್ನು ಕೈ ಬಿಡಬಹುದು ಅಥವಾ ಸೇರಿಸಬಹುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.
8. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.
9. ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.
10. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.**

**ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ/ಮಾರುಕಟ್ಟೆ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ www.shimul.coop ಸಂಪರ್ಕಿಸಬಹುದು.**

**ಸಹಿ/-**

**ವ್ಯವಸ್ಥಾಪಕ ನಿರ್ದೇಶಕರು**

ದಿನಾಂಕ : 06.10.2016 — ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ

ಸ್ಥಳ : ಮಾಚೇನಹಳ್ಳಿ — ಜಿಲ್ಲಾ ಸಹಕಾರ ಹಾಲು ಒಕ್ಕೂಟ